# 7

# ಗತಿಸಿ ಹೋದವುಗಳಿಂದ ಎಚ್ಚರಿಕೆ

## (3:7-4:16)

ಇಬ್ರಿಯ ಪುಸ್ತಕವು ಪ್ರೋತ್ಸಾಹದ ಪುಸ್ತಕವಾಗಿದೆ. ಸರಿಯಾದದ್ದನ್ನು ಮಾಡಿರಿ ಎಂಬ ಉತ್ತೇಜನದ ನೀಡಿದ ಪುಸ್ತಕವಾಗಿದೆ. 3:7-4:16 ರ ಉದ್ದೇಶ ಇದೇ ಆಗಿದೆ, ಹಾಗೂ ಎರಡನೆ ಎಚ್ಚರಿಕೆಯೂ ಆಗಿದೆ.[1] "ಯೇಸುವನ್ನು ಲಕ್ಷ್ಯವಿಡಿರಿ" ಎಂಬ ತತ್ವವನ್ನು ಈ ಪಾಠದಲ್ಲಿ ಗಮನಿಸಿದ್ದೇವೆ (3:7-14), ಮುಂದಿನ ಎರಡು ಪಾಠಗಳಲ್ಲೂ, ಈ ವಿಷಯವನ್ನು ಮುಂದುವರೆಸಲಾಗಿದೆ. ಈ ಪಾಠದಲ್ಲಿ ಕೂಲಂಕುಷವಾಗಿ ಪರಿಶೀಲನೆ ಮಾಡೋಣ.

ಈ ಪಾಠಕ್ಕೆ ನಾನು "ಗತಿಸಿ ಹೋದವುಗಳಿಂದ ಎಚ್ಚರಿಕೆ" ಎಂಬ ಶಿರೋನಾಮವನ್ನು ನಾನು ನೀಡಿದ್ದೇನೆ. ಅಧ್ಯಾಯ 3 ಮತ್ತು 4ರಲ್ಲಿ, ಕೀರ್ತನೆ 95ನ್ನು ಉಲ್ಲೇಖಿಸಲಾಗಿದೆ. ಈ ಭಾಗದಲ್ಲಿ ದಾವೀದನು ಜನರನ್ನು ಆರಾಧನೆಗೆ ಆಹ್ವಾನಿಸಿ, ಅರಣ್ಯದ ಅನುಭವದಿಂದ, ಇಸ್ರಾಯೇಲ್ಯರು ನಂಬಿಗಸ್ತರಾಗಿರಬೇಕೆಂದು ಉತ್ತೇಜಿಸಿದ್ದಾನೆ. ದೇವರು ತನ್ನ ಭಲವಾದ ಹಸ್ತಗಳಿಂದ ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರತಂದನು. ಅವರು ಕೆಂಪು ಸಮುದ್ರವನ್ನು ದಾಟಿ ಕಾನಾನ್ ದೇಶದ ಮಾರ್ಗದಲ್ಲಿದ್ದರು. ಆ ಸಮಯದಲ್ಲಿ ದೇವರು ಅವರಿಗೆ ನೀಡಿದ ಬಿಡುಗಡೆಯ ನಿಮಿತ್ತ ಸ್ತುತಿಸುವ ಬದಲು, ಅವರು ಗುಣಗುಟ್ಟಿದರು. ಹಾಗೂ ದೂರಿದರು.[2] ಅವರು ನೀರಿನ ಕುರಿತಾಗಿ ದೂರಿದರು (ವಿಮೋಚನಕಾಂಡ 17:2-7; ಕೀರ್ತನೆ 95:8). ಹನ್ನೆರಡು ಜನ ಗೂಢಾಚಾರರು, ಕಾನನ್ಯ ದೇಶವನ್ನು ಸಂಚರಿಸಿ, ಹಿಂದಿರುಗಿ ಬಂದು ನೀಡಿದ ವರದಿಯ ನಿಮಿತ್ತ ರಾತ್ರಿಯೆಲ್ಲಾ ಗೋಳಾಡಿದರು (ಅರಣ್ಯಕಾಂಡ 13:1-14:2). ಅವರ ಅಪನಂಬಿಕೆ ದೆಸೆಯಿಂದ, ಅವರು ವಾಗ್ದಾನ ದೇವರನ್ನು ಕಾಣುವದಿಲ್ಲ ಎಂಬ ತೀರ್ಪನ್ನು ದೇವರು ಅವರಿಗೆ ನೀಡಿದನು. ಅವರು ಅರಣ್ಯದಲ್ಲೇ ನಾಶವಾಗುವರು ಅಂದನು (ಅರಣ್ಯಕಾಂಡ 14:22, 23, 29, 30; ಧರ್ಮೋಪದೇಶಕಾಂಡ 1:34-38; ಕೀರ್ತನೆ 95:10, 11).

ತನ್ನ ದಿವಸಗಳಲ್ಲಿ ಇದ್ದ ಜನರಿಗೆ ದಾವೀದನು ಇಸ್ರಾಯೇಲ್ಯರ ಇತಿಹಾಸದ ನ್ಯೂನತೆಗಳನ್ನು ಹೇಳಿ ಎಚ್ಚರಿಸಿರುವಾಗ, ಅವುಗಳಿಂದ ದೇವ ಜನರಿಗೆ ಈಗಲೂ ಎಚ್ಚರಿಕೆ ಉಂಟಾಗುತ್ತದೆ.[3] ನಮ್ಮ ಪಾಠದಲ್ಲಿ ಇಸ್ರಾಯೇಲ್ಯರ ಅರಣ್ಯದ ಅನುಭವವನ್ನು ಅಭ್ಯಾಸಿಸಿ, ಅದರಲ್ಲಿರುವ ಅಂಶಗಳನ್ನು ನಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳೋಣ.

### ಪಾಪ

#### ನಾವುಗಳು ಆಶೀರ್ವಾದದ ಅವಕಾಶವನ್ನು ಹೊಂದಿದ್ದೇವೆ

ಅಬ್ರಹಾಮನಿಗೆ ಉಂಟಾದ ವಾಗ್ದಾನದ ದೇಶಕ್ಕೆ ಇಸ್ರಾಯೇಲ್ಯರು ಪ್ರಯಾಣಿಸುತ್ತಿದ್ದರು ಎಂಬುದು, ಇಸ್ರಾಯೇಲ್ಯರಿಗೆ, "ಶುಭಸಮಾಚಾರವಾಗಿತ್ತು" (ಇಬ್ರಿಯ 4:2).[4] ಅವರು ದೇವರಿಂದ ಆಶೀರ್ವದಿಸಲ್ಪಟ್ಟು,[5] ನಾಲ್ವತ್ತು ವರ್ಷಗಳ ಕಾಲ ಆತನ ಮಹತ್ತನ್ನು ಅನುಭವಿಸಿದರು (3:9ಬಿ). ಕಾನಾನ್ ದೇಶದ "ವಿಶ್ರಾಂತಿಗಾಗಿ" ಕಾಯುತ್ತಿದ್ದರು. (ಕಾನಾನ್ ಅಂದರೆ ವಿಶ್ರಾಂತಿಸ್ಥಳ ಧರ್ಮೋಪದೇಶಕಾಂಡ 12:9.)

ಅದೇ ವಿಧವಾಗಿ ನಾವೆಲ್ಲರೂ ಯೇಸುವಿನ ಸುವಾರ್ತೆಯನ್ನು ಕೇಳಿದ್ದೇವೆ (ಇಬ್ರಿಯ 4:2;

ರೋಮಾಪುರ 10:15, 16), ನಾವುಗಳು ಸಹ ದೇವರ ಮಹತ್ವವನ್ನು ಅನುಭವಿಸಿದ್ದೇವೆ, ಮತ್ತು ಆತನ ಕೃತ್ಯಗಳನ್ನು ನಮ್ಮ ಜೀವಿತದಲ್ಲಿ ಅನುಭವಿಸಿದ್ದೇವೆ (ರೋಮಾಪುರ 8:28), ಹಾಗೂ ಪರಲೋಕದ ವಿಶ್ರಾಂತಿಯ ವಾಗ್ದಾನವನ್ನು ಹೊಂದಿರುವೆವು (ಇಬ್ರಿಯ 4:1, 3-5, 9-11; ಪ್ರಕಟಣೆ 14:13).[6]

**ದೇವರು ಬಯಸುವಂಥ ರೀತಿಯಲ್ಲಿ ನಾವುಗಳಿರಬೇಕು**

ನಾವು ಸುವಾರ್ತೆಯನ್ನು ಕೇಳಿ, ಆತನ ಆಶೀರ್ವಾದ ಹಾಗೂ ವಾಗ್ದಾನದ ವಿಶ್ರಾಂತಿಯನ್ನು ಹೊಂದಿದವರಾಗಿದ್ದರೂ, ದೇವರು ಬಯಸುವಂಥ ರೀತಿಯಲ್ಲಿ ಇಲ್ಲದಿರಲು ಸಾಧ್ಯವಿದೆ. ದೇವರಿಂದ ಆಶೀರ್ವಾದ ಹೊಂದಿದ ನಂತರವೇ, ಇಸ್ರಾಯೇಲ್ಯರು ಪಾಪಮಾಡಿದರು (ಇಬ್ರಿಯ 3:17). ಅವರು ದೇವರಲ್ಲಿ ನಂಬಿಕೆಯಿಟ್ಟು ಭರವಸದಿಂದಿರಲಿಲ್ಲ (ಇಬ್ರಿಯ 3:18, 19; 4:2). ಅವರ ಹೃದಯಗಳು ಸಹ ಕಠಿಣಗೊಂಡು (3:8, 10), ಜೀವವುಳ್ಳ ದೇವರಿಂದ ಸರಿದು ಹೋದರು.

ಸಮೃದ್ಧಿಯಾದ ಆಶೀರ್ವಾದಗಳನ್ನು ಹೊಂದಿದ ನಂತರವೂ, ಪಾಪ ಮಾಡಲು ಸಾಧ್ಯವಿದೆ (3:13; 1 ಯೋಹಾನ 1:8, 10ನ್ನು ನೋಡಿ), ದೇವರನ್ನು ನಂಬುವದರಲ್ಲಿ, ಆತನಲ್ಲಿ ಭರವಸವಿಡುವದರಲ್ಲಿ ಸೋತು ಹೋಗಬಹುದು (ಇಬ್ರಿಯ 3:12; 4:11), ಮತ್ತು ಜೀವವುಳ್ಳ ದೇವರಿಂದ ದೂರವಾಗಬಹುದು (3:12, 13; 4:11).

**ಪರಿಣಾಮಗಳ ಬಗ್ಗೆ ಗಮನವಿಡಬೇಕು**

ಇದರ ಪರಿಣಾಮಗಳೇನು? ಇಸ್ರಾಯೇಲ್ಯರು ಕಠಿಣರಾಗಿ, ದೇವರಿಂದ ದೂರವಾಗುವಾಗ, ದೇವರಿಗೆ ಕೋಪ ಉಂಟು ಮಾಡಿದರು (3:9, 10). ಅವರು ವಾಗ್ದಾನದ ವಿಶ್ರಾಂತಿಯನ್ನು ಹೊಂದಲಿಲ್ಲ (3:11, 17, 19); ಆದ್ದರಿಂದ ವಾಗ್ದಾನದ ದೇಶಕ್ಕೆ ಅವರಿಗೆ ಪ್ರವೇಶ ದೊರೆಯಲಿಲ್ಲ.

ಒಂದು ವೇಳೆ ನಾವುಗಳು ಹೃದಯವನ್ನು ಕಠಿಣಮಾಡಿಕೊಂಡು, ದೇವರಿಂದ ದೂರ ಹೋಗುವದಾದರೆ, ದೇವರಿಗೆ ಬೇಸರ ಉಂಟಾಗುತ್ತದೆ, ಮತ್ತು ಪರಲೋಕದ ವಿಶ್ರಾಂತಿಯನ್ನು ಕಳಕೊಳ್ಳುತ್ತೇವೆ.

## ಪರಿಹಾರ

ಇವುಗಳೆಲ್ಲವು ಸತ್ಯವೇ ಆಗಿರುವದರಿಂದ, ಅವುಗಳನ್ನು ಹೇಗೆ ತಡೆಗಟ್ಟಬಹುದು?[7] ಈ ವಿಚಾರದಲ್ಲಿ ಇಸ್ರಾಯೇಲ್ಯರಿಗೆ ಯಾವ ಕೊರತೆಯಿತ್ತು, ನಮಗೆ ಯಾವ ಕೊರತೆಯಿದೆ? ಮುಂದಿನ ಅಂಶಗಳನ್ನು ಪರಿಪಾಲಿಸಬೇಕು.

1. ದೇವರ ವಾಕ್ಯವನ್ನು ಗಮನಿಸಿ, ಅನುಸರಿಸಿದರೆ ತೀರ್ಪಿಗೆ ಒಳಗಾಗುವದಿಲ್ಲ (3:7, 10ಬಿ; 4:12).
2. ಎಡವಿ ಬೀಳುವ ವಿಚಾರದಲ್ಲಿ ಎಚ್ಚರವುಳ್ಳವರಾಗಿರಿ (3:12; 4:1, 11; ನೋಡಿರಿ 1 ಕೊರಿಂಥ 10:12).
3. ಹೃದಯವು ನಿರ್ಮಲವಾಗಿರಲಿ (3:12).
4. ಪರಸ್ಪರ ಉತ್ತೇಜಿಸಿರಿ (3:13).
5. ಈ ದಿನ ಮಾತ್ರ ನಮಗೆ ಲಭ್ಯವಿದೆ ಎಂದು ತಿಳುಕೊಳ್ಳಿರಿ (3:7, 13, 15; 4:7).
6. ದೃಢವಾಗಿ ಹಿಡುಕೊಳ್ಳಲು ನಿಶ್ಚಯಿಸಿ (3:14).

7. ದೇವರನ್ನು ಮೋಸಗೊಳಿಸಲಾರವು ಎಂಬುವದನ್ನು ತಿಳಿಕೊಳ್ಳಿರಿ (4:12, 13).
8. ಯೇಸುವನ್ನೇ ಅವಲಂಭಿಸಿರಿ (4:14-16).

ಎಚ್ಚರಿಕೆಯ ಚಿಹ್ನೆಗಳನ್ನು ನಿರ್ಲಕ್ಷ್ಯ ಮಾಡುವದು ಅಪಾಯವೇ. ಇಬ್ರಿಯ ಬರಹಗಾರನು ನೀಡಿರುವ ಎಚ್ಚರಿಕೆಗೆ ಗಮನ ನಿಡೋಣ. ಕಳೆದುಹೋದ ವಿಚಾರಗಳಿಂದ ಪಾಠವನ್ನು ಕಲಿಯದವನು, ಪುನಃ ಎಡವುವ ಸಾಧ್ಯತೆಯಿದೆ. ಅರಣ್ಯದಲ್ಲಿನ ಇಸ್ರಾಯೇಲ್ಯರಿಗೆ ಗಮನ ನಿಡೋಣ. ಕಳೆದು ಹೋದ ವಿಚಾರಗಳಿಂದ ಪಾಠವನ್ನು ಕಲಿತು ಅವರು ಮಾಡಿದ ತಪ್ಪುಗಳನ್ನು ಮಾಡದೆ ಇರೋಣ.

## ಬೋಧಕರಿಗಾಗಿ ಟಿಪ್ಪಣಿ

ಹಳೆಯ ಒಡಂಬಡಿಕೆಯ ಕೆಲವು ವಿಚಾರಗಳನ್ನು ಅರಿಯದೆ, ಇಬ್ರಿಯ ಪುಸ್ತಕವನ್ನು ತಿಳುಕೊಳ್ಳುವದು ಅಸಾಧ್ಯವಾಗಿದೆ. ಆದ್ದರಿಂದ ಈ ವಿಚಾರಗಳು ಇರುವ ಕೀರ್ತನೆ 95:7ಬಿ-11 ರ ಭಾಗದ, ಇಸ್ರಾಯೇಲ್ಯರು ಅರಣ್ಯದಲ್ಲಿ ಅಲೆದಾಡುವಾಗ ಸಂಭವಿಸಿದ ಸಂಗತಿಗಳನ್ನು ಅರಿತು ಕೊಳ್ಳಿರಿ.

3:1-14 ರಲ್ಲಿ ಕೆಲವು ಪಟ್ಟಿಯನ್ನು ಮಾಡಲಾಗಿದೆ, ಮುಂದಿನ ಭಾಗದಿಂದ ಅಗತ್ಯವಿರುವ ಪಟ್ಟಿಯನ್ನು ಮಾಡಿಕೊಳ್ಳಬಹುದು. ಇಸ್ರಾಯೇಲ್ಯರ ಬೀಳುವಿಕೆಗೆ ಕಾರಣವಾದ ಸಂಗತಿಗಳನ್ನು ಪಟ್ಟಿ ಮಾಡಲು ನಿಮ್ಮ ಕೇಳುಗರಿಗೆ ಹೇಳಬಹುದು.

---

ಟಿಪ್ಪಣಿಗಳು

[1]"ಉತ್ತೇಜನದ ಮಾತುಗಳ" ಪಾಠವನ್ನು ನೋಡಿರಿ. [2]ಇಸ್ರಾಯೇಲ್ಯರ ಇತಿಹಾಸವನ್ನು ತಿಳಿಯಬಹುದು. [3]1 ಕೊರಿಂಥ 10:1-13 ರ ಇಸ್ರಾಯೇಲ್ಯರ ಚರಿತ್ರೆಯಿಂದ ಜನರಿಗೆ ಎಚ್ಚರ ನೀಡಬಹುದು. [4]ಗ್ರೀಕ್‌ನ "ಗಾಸ್ಪಲ್" ಎಂಬದೇ "ಶುಭ ಸಂದೇಶ." [5]ದೇವರಿಂದ ದೊರಕಿದ ಮುನ್ನ ಹಾಗೂ ಸಂರಕ್ಷಣೆಯ ನಿದರ್ಶನ ನೀಡಿರಿ. [6]ಭಾನುವಾರವು ಕ್ರೈಸ್ತರ ಸಬ್ಬತ್ ಆಗಿರದೆ, "ಪರಲೋಕದ ವಿಶ್ರಾಂತಿಯೇ" ಸಬ್ಬತ್ ಆಗಿರುತ್ತದೆ. [7]"ಯೇಸುವನ್ನು ಲಕ್ಷ್ಯವಿಡಿರಿ ಎಂಬ ಪಾಠಕ್ಕೆ ಸಮನಾಗಿದೆ."